ಸಂದರ್ಶನ

# ನನ್ನೂರಿನ ಕಥೆಗಳನ್ನೇ ಮುಂದೂ ಮಾಡ್ತೀನಿ...

**‘ಫೋಟೋ’ದ ಯುವ ನಿರ್ದೇಶಕ ಉತ್ಸವ್ ಗೋನವಾರ ಸಂದರ್ಶನ**

**ರಾಯಚೂರು ಜಿಲ್ಲೆಯ ಉತ್ಸವ್ ಗೋನವಾರ ನಿರ್ದೇಶನದ ‘ಫೋಟೋ’ ಇತ್ತೀಚಿನ ದಿನಗಳಲ್ಲಿ ಸಹೃದಯರ ಗಮನಸೆಳೆದಿರುವ ಸಿನಿಮಾ. ಕೊರೊನಾ ದಿನಗಳಲ್ಲಿ ಜನಸಾಮಾನ್ಯರ ತವಕತಲ್ಲಣಗಳನ್ನು ಧ್ವನಿಪೂರ್ಣವಾಗಿ ಚಿತ್ರಿಸಿರುವ ಈ ಸಿನಿಮಾ, ನೋಡುಗರ ಎದೆಗಳಲ್ಲಿ ಹುಟ್ಟಿಸುವ ಕಂಪನಗಳು ಒಂದೆರಡಲ್ಲ. ಈ ವಿಶಿಷ್ಟ ಕಲಾಕೃತಿಯ ನಿರ್ದೇಶಕನನ್ನು ಅದೇ ಭಾಗದ ಕಥೆಗಾರ, ‘ಸುಧಾ’ಕ್ಕಾಗಿ ಮಾಡಿರುವ ವಿಶೇಷ ಸಂದರ್ಶನ ಇಲ್ಲಿದೆ.**

■ **ಶರಣಬಸವ ಕೆ. ಗುಡದಿನ್ನಿ**

**ಕಥೆಗಾರ ಕಂಡಂತೆ ನಿರ್ದೇಶಕ**



‘ಫೋಟೋ’ ಸಿನಿಮಾ ಈಗ ಚಿತ್ರರಸಿಕರ ಮಾತಲ್ಲೂ ಮನಸಲ್ಲೂ ಬೆರೆತುಹೋಗಿದೆ. ಕೊರೊನಾ ನಿಯಂತ್ರಣಕ್ಕಾಗಿ ಅವಸರದಲ್ಲಿ ಹೇರಿದ ಲಾಕ್‌ಡೌನ್ ಪರಿಣಾಮ, ವಲಸೆ ಕಾರ್ಮಿಕರೂ ಸೇರಿದಂತೆ ಅಸಂಖ್ಯಾತ ಜನರು ಬೀದಿಗೆ ಬಿದ್ದು ಅನುಭವಿಸಿದ ತ್ರಾಸು ಒಂದೆರಡಲ್ಲ. ಆ ತಲ್ಲಣವನ್ನು ಇಟ್ಟುಕೊಂಡು ಒಂದೂವರೆ ಗಂಟೆ ನಮ್ಮ ಲಕ್ಷ್ಯ ಆಚೀಚೆ ಅಲುಗದಂತೆ ಹಿಡಿದಿಟ್ಟಿರುವ ಯಶಸ್ಸು ಯುವ ನಿರ್ದೇಶಕ ಉತ್ಸವ್ ಗೋನವಾರ ಅವರದು. ನಿರ್ದೇಶನದ ಜೊತೆಗೆ ನಿರ್ಮಾಣದ ಹೊಣೆಯನ್ನೂ ಉತ್ಸವ್ ಹೊತ್ತಿದ್ದಾರೆ. ಬೇನೆಗಿಡ, ಜಾಲಿಗಿಡಗಳೂ ಸೇರಿದಂತೆ ನೋಡುವ ನೋಟದುದ್ದಕ್ಕೂ ಹೆಬ್ಬಾವಿನಂತೆ ಮೈಚಾಚಿ ಮಲಗಿದ ಟಾರು ರಸ್ತೆಗಳು ಮತ್ತು ಅಸಹಾಯಕವಾಗಿ ಆಕಾಶ ನೋಡುತ್ತ ಮಲಗಿರುವ ಬೇಸಿಗೆಯ ಎರಿ ಹೊಲಗಳೂ ಮಸಾರಿ ಹೊಲಗಳೂ ಇಲ್ಲಿ ಪಾತ್ರಗಳಾಗಿವೆ. ಮಂದಿ ಮನ್ಯಾಗ ಹಾಲು ಹಾಕಿಸ್ಕೊಂಡು ಬರುವಾಗ ಅವರ ಮನೆಯ ಗೋಡೆಗೆ ಸಿಗಾಕಿದ ವಿಧಾನಸೌಧದ ಫೋಟೋವನ್ನ ದುರುಗ್ಯಾ ನೋಡುವುದರೊಂದಿಗೆ ಆರಂಭವಾಗುವ ಸಿನಿಮಾ, ದುರುಗ್ಯಾನ ಹೆಣ ಊರು ತಲುಪುವುದರೊಂದಿಗೆ ಮುಗಿಯುತ್ತದೆ.

ಈ ಸಿನಿಮಾದ ಕಥೆಗಾಗಿ ನಾಕಾರು ತಿಂಗಳು ಪಟ್ಟಾಗಿ ಕುಳಿತು ಕೆಲಸ ಮಾಡಿರುವ ಉತ್ಸವ್, ತಮ್ಮ ಹುಟ್ಟೂರು ಗೋನವಾರದ ಭಾಷೆಯನ್ನೇ ಸಿನಿಮಾದುದ್ದಕ್ಕೂ ಯಥಾವತ್ತಾಗಿ ಉಳಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಯಾರನ್ನೂ ದೂಷಿಸದೆ ‘ನಡೆದದ್ದು ಹೀಗೆ’ ಅಂತ ತಣ್ಣಗೆ ಕಥೆ ಹೇಳಿದ್ದಾರೆ.

ಮಹಾದೇವ ಹಡಪದ, ಜಹಾಂಗೀರ್, ಸಂಧ್ಯಾ ಅರಕೆರೆ ಮತ್ತು ದುರುಗ್ಯಾನ ಪಾತ್ರದ ವೀರೇಶ ಎಲ್ಲರ ನಟನೆಯು ಅತ್ಯಂತ ಸಹಜವಾಗಿ ಮೂಡಿಬಂದಿದೆ. ಉತ್ಸಾಹಿ ಯುವ ನಿರ್ದೇಶಕ ಉತ್ಸವ್ ಗೋನವಾರ ಅವರ ಸಂದರ್ಶನ ಇಲ್ಲಿದೆ.

◆ **‘ಫೋಟೋ’ ಸಿನಿಮಾದ ಕಥೆ ನಿಮಗೆ ಹೊಳೆದದ್ದು ಯಾವಾಗ? ‘ಫೋಟೋ’ ಒಂದು ಕಿರುಚಿತ್ರವಾಗಬೇಕಿತ್ತು ಅಂತ ಸಂದರ್ಶನವೊಂದರಲ್ಲಿ ಹೇಳಿದ್ದೀರಿ. ಕಿರುಚಿತ್ರ ಸಿನಿಮಾ ಆಗಿ ಬದಲಾದದ್ದು ಹೇಗೆ?**

ಲಾಕ್‌ಡೌನ್ ಸಂದರ್ಭದಲ್ಲಿ ಒಂದು ಕಥೆ ಬರೀಬೇಕು ಅಂತ ಕೊಡಗಿನ ಸ್ನೇಹಿತರ ಹೋಂ ಸ್ಟೇ ಒಂದರಲ್ಲಿದ್ದೆ. ಆಗ ನಾನೊಂದು ಲೇಖನ ಓದಿದೆ. ಬೆಂಗಳೂರಿಂದ ಸಿಂಧನೂರಿನ ಹಳ್ಳಿಗೆ ನಡಕೊಂಡು ಹೋಗುವ ಗಂಗಮ್ಮ ಅನ್ನೋ ಹೆಣ್ಣುಮಗಳ ಕುರಿತ ಬರಹವದು. ಲಾಕ್‌ಡೌನ್‌ನಿಂದ ಊರಿಗೆ ಹೋಗಲು ಅವರಿಗೆ ಯಾವುದೇ ವಾಹನ ದೊರೆಯದ ಕಾರಣಕ್ಕೆ ನಡಕೊಂಡು ಸಿಂಧನೂರಿಗೆ ಹೊರಟಿದ್ದರು. ನಡಕಂಡು ಹೋಗ್ಬೇಕಾದ್ರೆ ಬಿಸಿಲಿಗೆ ಮತ್ತು ಗರ್ಭಿಣಿ ಆಗಿದ್ದ ಕಾರಣಕ್ಕೆ, ಮಲ್ಟಿ ಆರ್ಗನ್ ಡ್ಯಾಮೇಜ್ ಆಗಿ ಗಂಗಮ್ಮ ಸತ್ತುಹೋದಳು. ಗಂಗಮ್ಮ ಸತ್ತ ದಿನವೋ ಅಥವಾ ಅದರ ಹಿಂದುಮುಂದಿನ ದಿನವೋ, ಅಲ್ಲಿ ಕೆಲವು ಮನೆಗಳಲ್ಲಿ ದೀಪ ಹಚ್ಚಿದ ನೆನಪು. ಊರಿಗೆ ಹೋಗ್ತಾ ಇರೋ ಒಂದು ವರ್ಗದವರು ರಸ್ತೇಲಿ ಹಿಂಗ್ ಸಾವುನೋವು ಅನುಭವಿಸುತ್ತಿದ್ದುದು ನನ್ನನ್ನು ತುಂಬಾ ಕಾಡಿತ್ತು. ಈ ವಿಷಯಗಳನ್ನೆಲ್ಲ ಮರೀಬಾರದು, ಆ ಸಂಕಟವನ್ನು ಡಾಕ್ಯುಮೆಂಟರಿ ಮಾಡಬೇಕು ಅನ್ನಿಸಿತು.

ನನಗೆ ಗೊತ್ತಿರೋ ಮೀಡಿಯಂ ಸಿನಿಮಾ. ಹಾಗಾಗಿ, ಸಿನಿಮಾ ಮೂಲಕವೇ ಇದನ್ನು ಡಾಕ್ಯುಮೆಂಟ್ ಮಾಡೋಣ ಅಂತ ಅನಕೊಂಡು ಸಿನಿಮಾ ಮಾಡೋಕೆ ಶುರು ಮಾಡ್ದೆ. ಆದರೆ, ಅದಕ್ಕೂ ಮುಂಚೆ ಕಿರುಚಿತ್ರ ಅನಕೊಂಡೇ ಚಾಲೂ ಮಾಡಿದ್ದು. ಮತ್ತದು ಶಾರ್ಟ್ ಮೂವಿ